# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : **1005**
**ಮಾನ್ಯ ಸದಸ್ಯರ ಹೆಸರು** : **ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ)**
**ಉತ್ತರಿಸುವ ದಿನಾಂಕ** : **12/03/2026**
**ಉತ್ತರಿಸುವ ಸಚಿವರು** : **ಗೃಹ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ಇಲ್ಲಿಯವರೆಗೂ ಎಷ್ಟು ಸೈಬರ್ ಅಪರಾಧ ಪ್ರಕರಣಗಳು ನಡೆದಿದೆ; (ಜಿಲ್ಲಾವಾರು ವರದಿ ನೀಡುವುದು) | ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ. |
| ಆ) | ನ್ಯಾಷನಲ್ ಕ್ರೈಂ ರೆಕಾರ್ಡ್ಸ್ ಬ್ಯೂರೋ (ಎನ್‌ಸಿಆರ್‌ಬಿ) ಪಟ್ಟಿಯಲ್ಲಿ ಕರ್ನಾಟಕವು ಸೈಬರ್ ಅಪರಾಧ ಪ್ರಕರಣಗಳಲ್ಲಿ ಪ್ರಥಮ ಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ತೆಗೆದುಕೊಂಡ ಕ್ರಮಗಳೇನು; | ನ್ಯಾಷನಲ್ ಕ್ರೈಂ ರೆಕಾರ್ಡ್ಸ್ ಬ್ಯೂರೋ (ಎನ್‌ಸಿಆರ್‌ಬಿ) ಪಟ್ಟಿಯಲ್ಲಿ ಕರ್ನಾಟಕವು ಸೈಬರ್ ಅಪರಾಧ ಪ್ರಕರಣಗಳಲ್ಲಿ ಪ್ರಥಮ ಸ್ಥಾನದಲ್ಲಿರುವುದಾಗಿ ವರದಿಯಾಗಿರುತ್ತದೆ.<br><br>ಸೈಬರ್ ಅಪರಾಧ ಪ್ರಕರಣಗಳನ್ನು ತಡೆಗಟ್ಟುವಲ್ಲಿ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:-<br>➢ ರಾಜ್ಯದಲ್ಲಿ ಇಂಟರ್‌ನೆಟ್ ಮೊಬೈಲ್ ಫೋನ್ ಆನ್‌ಲೈನ್ ಮೂಲಕ ವಂಚನೆಗೊಳಗಾಗುತ್ತಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಾಗೂ ಪ್ರತಿದಿನ ದಾಖಲಾಗುವ ಪ್ರಕರಣಗಳನ್ನು ಶೀಘ್ರವಾಗಿ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ /177/ಪಿಓಪಿ/2024, ದಿನಾಂಕ:01/08/2025 ರಲ್ಲಿ ರಾಜ್ಯದ 45 CEN ಪೊಲೀಸ್ ಠಾಣೆಗಳನ್ನು ಸೈಬರ್ ಅಪರಾಧ ಪೊಲೀಸ್ ಠಾಣೆಗಳೆಂದು (Cyber Crime Police Station) ಮರುಪದನಾಮೀಕರಿಸಿ ಆದೇಶಿಸಲಾಗಿದೆ. Information Technology Act -2000 & IPC/BNS ರಡಿಯಲ್ಲಿ ಸೈಬರ್ ಅಪರಾಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗುವ ಪ್ರಕರಣಗಳನ್ನು ದಾಖಲಿಸಲು ಹಾಗೂ ತನಿಖೆ ಕೈಗೊಳ್ಳಲು ಅಧಿಕಾರ ವ್ಯಾಪ್ತಿಯನ್ನು ನಿಗದಿಪಡಿಸಿ ಅಧಿಸೂಚಿಸಲಾಗಿದೆ.<br><br>➢ ರಾಜ್ಯದಲ್ಲಿ DGP ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದ್ದು, ಇವರು ಸೈಬರ್ ಕ್ರೈಂ ಪೋಲಿಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ. ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ನೇರವಾಗಿ ಇವರಿಗೆ ಕಾರ್ಯ ವರದಿ ಸಲ್ಲಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತವೆ. ಈ ಕ್ರಮದಿಂದ ಸೈಬರ್ ಅಪರಾಧಗಳ ತನಿಖಾ ವೇಗ ಹೆಚ್ಚಲಿದೆ.<br><br>➢ ಡಿಜಿಟಲ್ ಅರೆಸ್ಟ ಮತ್ತು ಸೈಬರ್ ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ ಕರ್ನಾಟಕ ರಾಜ್ಯಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಸಿ.ಪಿ.ಪಿ.ಎಸ್ ಪೊಲೀಸ್ ಠಾಣೆಗಳನ್ನು ಅತಿ ನಿಕಟವಾಗಿ ಮೇಲ್ವಿಚಾರಣೆ ಮಾಡಲು ಪ್ರತ್ಯೇಕ ಪೊಲೀಸ್ ಮಹಾನಿರ್ದೇಶಕರು, ಸೈಬರ್ ಕಮಾಂಡ್, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಸೈಬರ್ ಕಮಾಂಡ್ ಮತ್ತು ಪೊಲೀಸ್ ಉಪ ಮಹಾನಿರೀಕ್ಷಕರು, ಸೈಬರ್ ಕಮಾಂಡ್, ಹುದ್ದೆಯನ್ನು ಸೃಜನೆ ಮಾಡಿ, ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಲು ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. |

- ಭಾರತದ ಪ್ರಥಮ ವಿಶೇಷ ಸೈಬರ್ ಪೊಲೀಸ್ ಠಾಣೆಯನ್ನು 2001ರಲ್ಲಿ ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಯಿತು.
- ಸಿಐಡಿ ಅಡಿಯಲ್ಲಿ ಸೈಬರ್ ಕ್ರೈಂ ವಿಭಾಗವು ರಾಜ್ಯದ ಸೈಬರ್ ಅಪರಾಧ ತನಿಖೆಗೆ ಕೇಂದ್ರ ಕಛೇರಿ ಆಗಿದ್ದು, ಇತರೆ ಘಟಕಗಳೊಂದಿಗೆ ಸಮನ್ವಯ ಮಾಡುತ್ತದೆ.
- ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಗೃಹ ಸಚಿವಾಲಯದ ಎನ್.ಸಿ.ಆರ್.ಪಿ (National Cyber Crime Reporting Portal) ನಲ್ಲಿ ದೂರುಗಳನ್ನು ದಾಖಲಿಸಲು ಸಾರ್ವಜನಿಕರಿಗೆ ಅವಕಾಶವಿದ್ದು, ಈ ಪೋರ್ಟಲ್ ಮುಖಾಂತರ ದೂರುಗಳನ್ನು ಪಡೆದುಕೊಂಡು ತನಿಖೆಯನ್ನು ಕೈಗೊಂಡಿರುತ್ತದೆ.
- ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ನ್ಯಾಯಾಲಯವನ್ನು ಸೃಜನೆ ಮಾಡಲಾಗಿರುತ್ತದೆ.
- ಪ್ರತಿ ಸೈಬರ್ ಠಾಣೆಯಲ್ಲಿ ಸೈಬರ್ ಕ್ರೈಂಗಳಿಗೆ ಸಂಬಂಧಿಸಿದಂತೆ ಪ್ರಕರಣಗಳ ತನಿಖೆಯನ್ನು ಕೈಗೊಳ್ಳಲು ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ಡಿವೈಎಸ್ಪಿ/ಎಸಿಪಿ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಿ ಆದೇಶಿಸಲಾಗಿರುತ್ತದೆ.
- ಠಾಣಾ ಸರಹದ್ದಿನಲ್ಲಿ ಬರುವಂತಹ ಕಂಪನಿಗಳು, ಶಾಲಾ ಕಾಲೇಜುಗಳು, ಅಪಾರ್ಟ್‌ಮೆಂಟ್, ಪಾರ್ಕ್ ಮತ್ತು ಮುಂತಾದ ಸ್ಥಳಗಳಲ್ಲಿ ಸೈಬರ್ ಕ್ರೈಂ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆ.
- ಟಿ.ವಿ. ಮಾಧ್ಯಮ ಮತ್ತು ಪತ್ರಿಕಾ ಮಾಧ್ಯಮಗಳಲ್ಲಿ ಡಿಜಿಟಲ್ ಅರೆಸ್ಟ್ ಬಗ್ಗೆ ಜಾಹಿರಾತು ನೀಡಲಾಗಿರುತ್ತದೆ.
- ಡಿಜಿಟಲ್ ಅರೆಸ್ಟ್ ಮತ್ತು ಸೈಬರ್ ಅಪರಾಧ ಪ್ರಕರಣಗಳನ್ನು ತ್ವರಿತ ಗತಿಯಲ್ಲಿ ಪತ್ತೆ ಹಚ್ಚುವ ಕುರಿತು ಸೈಬರ್ ಕಮಾಂಡರ್ ಯುನಿಟ್ ರಚನೆಯಾಗಿರುತ್ತದೆ.
- ಬ್ಯಾಂಕ್‌ಗಳ ನೋಡಲ್ ಅಧಿಕಾರಿಗಳಿಗೆ ಮಾಸಿಕ ಸಭೆಗಳನ್ನು ತೆಗೆದುಕೊಂಡು ಸೈಬರ್ ಪ್ರಕರಣಗಳಲ್ಲಿ ಭಾಗಿಯಾಗುವ ಖಾತೆಗಳ ಮೇಲೆ ನಿಗಾವಹಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.
- ಸಿಸಿಯು ಘಟಕದಿಂದ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆಪ್ ಹಾಗೂ ಟ್ವಿಟರ್‌ಗಳ ಮೂಲಕ ಸೈಬರ್ ಜಾಗೃತಿಯ ಸಂದೇಶಗಳನ್ನು ರವಾನಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ನೀಡಲಾಗುತ್ತಿದೆ.
- ಶಾಲಾ ಕಾಲೇಜುಗಳಿಗೆ, ಇತರ ಸಂಸ್ಥೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿ ಹಾಗೂ ಸಾರ್ವಜನಿಕರುಗಳಿಗೆ ಡಿಜಿಟಲ್ ಅರೆಸ್ಟ್ ಹಾಗೂ ಇತರ ವಂಚನೆಗಳ ಬಗ್ಗೆ ಜಾಗೃತಿ ಮೂಡಿಸಲು ಜಾಗೃತಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಡಿಜಿಟಲ್ ಅರೆಸ್ಟ್ ಮತ್ತು ಸೈಬರ್ ಅಪರಾಧ ಪ್ರಕರಣಗಳಲ್ಲಿ ಆರೋಪಿಗಳ ಮೇಲೆ ಕಠಿಣ ಕಾನೂನು ಕ್ರಮಕೈಗೊಳ್ಳಲು ಐಟಿ

| | | |
|---|---|---|
| | | ಕಾಯ್ದೆ ಹಾಗೂ BNSನ ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಲಾಗುತ್ತಿದೆ.<br><br>➢ ಸೈಬರ್ ಅಪರಾಧ ಸಹಾಯವಾಣಿಗಳಿಗೆ "ಗೋಲ್ಡನ್ ಅವರ್" ನಲ್ಲಿ ಬರುವ ದೂರುಗಳನ್ನು ಸ್ವೀಕರಿಸಲು ಕರ್ನಾಟಕ ಪೊಲೀಸ್ ಇಲಾಖೆ 1930 ಹೆಲ್ಪ್‌ಲೈನ್ ಅನ್ನು ವೆಬ್‌ಬಾಟ್ ಸೌಲಭ್ಯದಿಂದ ಉನ್ನತೀಕರಿಸಿದೆ. ಇದರಿಂದ SMS ಮುಖಾಂತರ ಸ್ವಯಂ ಮಾಹಿತಿ ನೊಂದಣಿ ಮಾಡಿಕೊಳ್ಳಬಹುದಾಗಿರುತ್ತದೆ. ದೂರುಗಳನ್ನು "ಹಣಕಾಸು ಮತ್ತು ಹಣಕಾಸೇತರ" ಎಂದು ವಿಂಗಡಿಸುವ IVR ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಹೆಚ್ಚು ಕರೆಗಳು ಬಂದಾಗ ಆಟೋಮೇಟೆಡ್ ಕರೆ ವ್ಯವಸ್ಥೆ ಮೂಲಕ ಧ್ವನಿ ಮಾರ್ಗದರ್ಶನ ಸೌಲಭ್ಯವಿರುತ್ತದೆ. ದೂರುದಾರರು ತಮ್ಮ ದೂರಿನ ಸ್ಥಿತಿ ಹಂತವನ್ನು ತಿಳಿದುಕೊಳ್ಳಬಹುದಾಗಿರುತ್ತದೆ ಹಾಗೂ ಕಾಲ್ ಸೆಂಟರ್‌ಗಳು 24/7 ಕರ್ತವ್ಯ ನಿರ್ವಹಿಸುತ್ತಿರುತ್ತವೆ.<br><br>➢ ರಾಜ್ಯದಲ್ಲಿ "ಮನೆ-ಮನೆಗೆ ಪೊಲೀಸ್" ಎಂಬ ನೂತನ ಪರಿಕಲ್ಪನೆಯನ್ನು ಜಾರಿಗೊಳಿಸುವ ಮೂಲಕ ಪ್ರತಿ ಮನೆ-ಮನೆಗೆ ಪೊಲೀಸ್ ಭೇಟಿ ನೀಡುವ ಮೂಲಕ ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲಾಗಿದೆ.<br><br>➢ ಸದರಿ ಪ್ರಕರಣದಲ್ಲಿ ವಂಚನೆಗೊಳಗಾದ ಶೋಷಿತರ ಅನುಕೂಲಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಹಾಗೂ ನಗರ ವ್ಯಾಪ್ತಿಯಲ್ಲಿ ಒಂದೊಂದು ವಿಶೇಷ ಸೈಬರ್ ಪೊಲೀಸ್ ಠಾಣೆಗಳನ್ನು(ಸಿ.ಇ.ಎನ್ ಪೊಲೀಸ್ ಠಾಣೆ) ತೆರೆಯಲಾಗಿರುತ್ತದೆ.<br><br>➢ ಅಲ್ಲದೇ, ಸೈಬರ್ ಪ್ರಕರಣಗಳ ಇತ್ಯರ್ಥಪಡಿಸಲು ಆಧುನಿಕ ತಂತ್ರಜ್ಞಾನ ಹೊಂದಿರುವ ಉಪಕರಣಗಳನ್ನು ಬಳಸಲಾಗುತ್ತಿದ್ದು, ಹಾಗೂ ಆಧುನಿಕ ವಿದ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ಸಹ ನೀಡಲಾಗಿರುತ್ತದೆ.<br><br>➢ ಸಿಸಿಯು ಕಛೇರಿಯಲ್ಲಿ ಈಗಾಗಲೇ ಸಿ.ಎಫ್.ಯು (ಸೈಬರ್ ಫಾರೆನ್ಸಿಕ್ ಯುನಿಟ್) ವಿಭಾಗವನ್ನು ಹಿರಿಯ ಅಧಿಕಾರಿಗಳ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಿ.ಎಫ್.ಯು ವಿಭಾಗದ ಸೈಬರ್ ಲ್ಯಾಬ್‌ನಲ್ಲಿ ಆಧುನಿಕ ತಂತ್ರಜ್ಞಾನ ಸಲಕರಣೆಗಳನ್ನು ಬಳಸಿಕೊಂಡು ಸಿಎಫ್‌ಯು ವಿಭಾಗವು ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳ ಪ್ರಕರಣಗಳಲ್ಲಿನ ತನಿಖೆಯಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲಾಗುತ್ತಿದೆ.<br><br>➢ ಡಿಜಿಟಲ್ ಅರೆಸ್ಟ್ ಮತ್ತು ಸೈಬರ್ ಅಪರಾಧಗಳ ತನಿಖೆಯಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲು ಸಿಸಿಯು ಘಟಕದ ಸಿಸಿಡಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿ.ಎಫ್.ಯು ಘಟಕದಲ್ಲಿ ಇಬ್ಬರು ನುರಿತ ತಾಂತ್ರಿಕ ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿರವರುಗಳು ಸಿಸಿಡಿ ವಿಭಾಗದ ಸೈಬರ್ ಅಪರಾಧ ಪ್ರಕರಣಗಳಲ್ಲಿ ಹಾಗೂ ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ಜಪ್ತಿಪಡಿಸಲಾದ ಡಿಜಿಟಲ್ ಉಪಕರಣಗಳನ್ನು ತಾಂತ್ರಿಕ ವಿಶ್ಲೇಷಣೆ ಕೈಗೊಂಡು ತಾಂತ್ರಿಕ |

<table>
<tr><td></td><td></td><td>ಸಹಾಯವನ್ನು ಒದಗಿಸುತ್ತಿರುತ್ತಾರೆ.<br><br>➢ Centre for Cybercrime Investigation Training & Research (CCITR) ವಿಭಾಗದಲ್ಲಿ 2019 ಸಾಲಿನಿಂದ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧಗಳನ್ನು ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ಹಲವಾರು ತರಬೇತಿಗಳನ್ನು ನೀಡಲಾಗುತ್ತಿರುತ್ತದೆ.<br><br>➢ ಹ್ಯಾಕಿಂಗ್ ಹಾಗೂ ಇತರೆ ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲು Drone Forensics, RAID Forensics, Wearable device forensics, Cloud forensics, Crypto currency tracing and Investigation ನಂತಹ ಸುಧಾರಿತ ತರಬೇತಿಗಳನ್ನು ಹಾಗೂ ಆಧುನಿಕ ವಿದ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಅಧಿಕಾರಿ/ಸಿಬ್ಬಂದಿಗಳಿಗೆ ವಿಶೇಷ ತರಬೇತಿಗಳನ್ನು ಸಹ ನೀಡಲಾಗುತ್ತಿರುತ್ತದೆ.<br><br>➢ ಸ್ಥಾಯಿ ಆದೇಶ ಸಂಖ್ಯೆ:1053 ರಲ್ಲಿ ಏಕಾಂಗಿಯಾಗಿ ವಾಸಿಸುವ ಹಿರಿಯ ನಾಗರಿಕರಿಗೆ ಸುರಕ್ಷೆ ಮತ್ತು ವಿಶ್ವಾಸ ನೀಡುವ ಆಶಾಕಿರಣವಾಗಿ "ಆಸರೆ" ಎಂಬ ಸಮುದಾಯ ಪೊಲೀಸ್ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲಾಗಿದೆ.<br><br>➢ ಸಂತ್ರಸ್ತರ ದೂರು/ಅವಹಾಲುಗಳು, ಹೇಳಿಕೆಗಳು ಜೀವಬೇದರಿಕೆ ಇದ್ದರೆ ಅಗತ್ಯ ರಕ್ಷಣೆ ಜಾಮೀನು ಅರ್ಜಿಗಳು ಇದ್ದರೆ ಪರಿಶೀಲನೆ ಮುಂತಾದ ಸಮಸ್ಯೆಗಳನ್ನು ಆಲಿಸಲು ಪ್ರತಿ ತಿಂಗಳ 3ನೇ ಭಾನುವಾರವನ್ನು ಸಂತ್ರಸ್ತರ/ದೂರುದಾರರ (Victim Day) ನೊಂದವರ ದಿನವೆಂಬ ಕಾರ್ಯಕ್ರಮವನ್ನು ಠಾಣಾ ವ್ಯಾಪ್ತಿಯಲ್ಲಿ ಆಯೋಜಿಸಲಾಗುತ್ತಿದೆ.</td></tr>
<tr><td>ಇ)</td><td>ಕಳೆದ 5 ವರ್ಷದಿಂದ ಸೈಬರ್ ಅಪರಾಧ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ದೂರುಗಳ ಸಂಖ್ಯೆಯೆಷ್ಟು; ಎಷ್ಟು ಪ್ರಕರಣಗಳಲ್ಲಿ ಕೋರ್ಟ್ ಶಿಕ್ಷೆ ವಿಧಿಸಿದೆ; ಎಷ್ಟು ಪ್ರಕರಣಗಳು ಖುಲಾಸೆಗೊಂಡಿದೆ;</td><td>ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ದಾಖಲಾದ ಸೈಬರ್ ವಂಚನೆಯ ಕುರಿತು ದಾಖಲಾದ ಪ್ರಕರಣಗಳ ಸಂಖ್ಯೆ, ಮಾನ್ಯ ನ್ಯಾಯಾಲಯದಲ್ಲಿ ಶಿಕ್ಷೆ ವಿಧಿಸಿದ ಮತ್ತು ಖುಲಾಸೆಗೊಂಡಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ</th><th>ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ</th><th>ಖುಲಾಸೆಗೊಂಡ ಪ್ರಕರಣಗಳ ಸಂಖ್ಯೆ</th></tr>
<tr><td>2021</td><td>8396</td><td>40</td><td>83</td></tr>
<tr><td>2022</td><td>12920</td><td>45</td><td>111</td></tr>
<tr><td>2023</td><td>22255</td><td>58</td><td>114</td></tr>
<tr><td>2024</td><td>22483</td><td>25</td><td>85</td></tr>
<tr><td>2025</td><td>14899</td><td>10</td><td>9</td></tr>
<tr><td>2026 (Feb-20)</td><td>2007</td><td>0</td><td>0</td></tr>
</table></td></tr>
<tr><td>ಈ)</td><td>ಯಾವ ಯಾವ ರೀತಿಯಲ್ಲಿ ಸೈಬರ್ ಅಪರಾಧಗಳು ನಡೆಯುತ್ತಿದೆ; ಈ ಜಾಲವನ್ನು ಬೇಧಿಸಲು ಹಾಗೂ</td><td>ಕರ್ನಾಟಕ ರಾಜ್ಯದಲ್ಲಿ ಈ ಕೆಳಕಂಡಂತೆ ಸೈಬರ್ ಕ್ರೈಂ ಪ್ರಕರಣಗಳು ಐಟಿ ಕಾಯ್ದೆ ಮತ್ತು ಇತರೆ ಕಾಯ್ದೆಗಳಡಿ ವರದಿಯಾಗುತ್ತಿವೆ.</td></tr>
</table>

| | | |
|---|---|---|
| | ಸಾರ್ವಜನಿಕರನ್ನು ಎಚ್ಚರಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು; | ಸಾರ್ವಜನಿಕರು OTP fraud, Job fraud, Investment fraud ಮತ್ತು Digital fraud ಗಳಲ್ಲಿ ಹೆಚ್ಚಾಗಿ ವಂಚನೆಗೆ ಒಳಗಾಗಿ ಹಣ ಕಳೆದು ಕೊಳ್ಳುತ್ತಿರುತ್ತಾರೆ. ಇದಲ್ಲದೆ ಇತರೆ ವಂಚನೆಗಳ ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಲಾಗಿದೆ.<br><br>ಸೈಬರ್ ಅಪರಾಧಗಳ ಜಾಲವನ್ನು ಬೇಧಿಸಲು ಹಾಗೂ ಸಾರ್ವಜನಿಕರನ್ನು ಎಚ್ಚರಿಸಲು ಕೈಗೊಂಡ ಕಾರ್ಯಕ್ರಮಗಳ ವಿವರಗಳು ಈ ಕೆಳಕಂಡಂತಿವೆ:-<br>➢ ಸೈಬರ್ ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ ಸಿಐಡಿ ಕಛೇರಿಯಲ್ಲಿ Centre Investigation & Digital Forensic Training & Research" Data Security Council of India ರವರ ಸಹಯೋಗದೊಂದಿಗೆ ವಿಶೇಷ ಸೈಬರ್ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ.<br>➢ ಬ್ಯಾಂಕಿಂಗ್ ಅಪರಾಧಗಳಿಗೆ ಸಂಬಂಧಿಸಿದಂತೆ ಆರ್.ಬಿ.ಐ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಹಾಗೂ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಬ್ಯಾಂಕಿಂಗ್ ಹಾಗೂ ಇತರೆ ಘೈಬರಿ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಲವು ಪರಿಣಾಮಕಾರಿ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಸಾರ್ವಜನಿಕರ ಹಿತ ಕಾಪಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ರಾಜ್ಯದ ಎಲ್ಲಾ ಟೆಲಿಕಾಂ ಸೇವಾದಾರರನ್ನು (TSP) ಸಂಪರ್ಕಿಸಿ ಅವರ ಗ್ರಾಹಕರಿಗೆ ಬ್ಯಾಂಕಿಂಗ್ ಡಿಟೇಲ್ಸ್ ಮತ್ತು ಪಾಸ್‌ವರ್ಡನ್ನು ಯಾರಿಗೂ ನೀಡಬಾರದೆಂದು ಸಮೂಹ ಸಂದೇಶಗಳನ್ನು (Group Messages) ರವಾನಿಸುವ ಮೂಲಕ ಸಾರ್ವಜನಿಕ ಗ್ರಾಹಕರಿಗೆ ಜಾಗೃತಿ ಮೂಡಿಸಲಾಗಿರುತ್ತದೆ.<br>➢ ಸಿಐಡಿ ಕಛೇರಿಯಲ್ಲಿ ಸಿಸಿಐಟಿಆರ್ ವಿಭಾಗದಲ್ಲಿ ಕಳೆದ ಹಲವು ವರ್ಷಗಳಿಂದ ಮಿಲಿಟರಿ, ಬ್ಯಾಂಕಿಂಗ್ ಸೆಕ್ಟರ್, ಸರ್ಕಾರಿ ಸಂಸ್ಥೆಗಳು ನ್ಯಾಯಾಂಗದ ಅಭಿಯೋಜಕರಿಗೆ, ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್ ಕ್ರೈಂ ಅಪರಾಧಗಳನ್ನು ತಡೆಗಟ್ಟುವ ಬಗ್ಗೆ ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ.<br>➢ ಸೈಬರ್ ಕ್ರೈಂ ಅಪರಾಧದ ಬಗ್ಗೆ ಸಾರ್ವಜನಿಕರಲ್ಲಿ ತಿಳಿವಳಿಕೆ ಮೂಡಿಸುವ ಸಲುವಾಗಿ ಮುದ್ರಣ ಮಾಧ್ಯಮಗಳ (Print Media) ಮೂಲಕ ವರದಿಗಳನ್ನು ಪ್ರಕಟಿಸುವುದರ ಮೂಲಕ ಜಾಗೃತಿಯನ್ನು ಮೂಡಿಸಲಾಗುತ್ತಿದೆ.<br>➢ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆಪ್ ಹಾಗೂ ಟ್ವಿಟರ್‌ಗಳ ಮೂಲಕ ಸೈಬರ್ ಜಾಗೃತಿಯ ಸಂದೇಶಗಳನ್ನು ರವಾನಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಲಾಗುತ್ತಿದೆ.<br>➢ ಸೈಬರ್ ಜಾಗೃತಿ ಸಪ್ತಾಹವನ್ನು ಆಚರಿಸಲು ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಸೈಬರ್ |

| | | |
|---|---|---|
| | | ಅಪರಾಧಗಳನ್ನು ತಡೆಗಟ್ಟುವ ಬಗ್ಗೆ ಅರಿವನ್ನು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸೈಬರ್ ಜಾಗೃತಿ ಸಪ್ತಾಹವನ್ನು ಆಚರಿಸುವ ಮೂಲಕ ಕರಪತ್ರಗಳನ್ನು ಮುದ್ರಿಸಿ ಶಾಲಾ ಕಾಲೇಜ್ ಗಳಿಗೆ ಭೇಟಿ ನೀಡಿ ಸೈಬರ್ ಅಪರಾಧಗಳನ್ನು ತಡೆಗಟ್ಟುವ ಬಗ್ಗೆ ಅರಿವನ್ನು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಆರ್ಥಿಕ ಸ್ವರೂಪದ ಸೈಓ ಪದ ಸೈಬರ್ ಅಪರಾಧವನ್ನು ತಡೆಗಟ್ಟಲು ಉಚಿತ ಸಹಾಯವಾಣಿ (ಟಾಲ್ ಫ್ರೀ) ಸಂ:1930 ಸೇವೆಯನ್ನು ಪ್ರಾರಂಭಿಸಿರುತ್ತದೆ. ಕರೆ ವಂಚನೆಗೆ ಬಳಕೆಯಾಗುವ ಬ್ಯಾಂಕ್ ಖಾತೆಗಳನ್ನು ತನಿಖೆಯ ಸಲುವಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಯೋಜನೆಯನ್ನು ಜಾರಿಗೆ ತರಲಾಗಿದೆ. ಕರೆ ಮಾಡಿ ದೂರು ದಾಖಲಿಸುವ ಹಾಗೂ ವಂಚನೆಗೆ ಬಳಕೆಯಾಗುವ ಬ್ಯಾಂಕ್ ಖಾತೆಗಳನ್ನು ತನಿಖೆಯ ಸಲುವಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಯೋಜನೆಯನ್ನು ಜಾರಿಗೆ ತರಲಾಗಿದೆ. |
| ಉ) | ರಾಜ್ಯದಲ್ಲಿ ಡಿಜಿಟಲ್ ಅರೆಸ್ಟ್ ಪ್ರಕರಣಗಳು ಹೆಚ್ಚಳವಾಗಿರುವುದು ಹಾಗೂ ಅಮಾಯಕರಿಗೆ ಕೋಟ್ಯಂತರ ಹಣ ವಂಚನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | ಹೌದು<br>2024 ಹಾಗೂ 2025ನೇ ಸಾಲಿಗೆ ಹೋಲಿಸಿದರೆ ಡಿಜಿಟಲ್ ಅರೆಸ್ಟ್ ಪ್ರಕರಣಗಳ ಇಳಿಮುಖವಾಗಿರುತ್ತದೆ. ಮುಂದುವರೆದು, ಡಿಜಿಟಲ್ ಅರೆಸ್ಟ್ ಪ್ರಕರಣಗಳನ್ನು ತಡೆಗಟ್ಟಲು ಕೈಗೊಂಡ ಕ್ರಮಗಳ ವಿವರಗಳನ್ನು ಈ ಪ್ರಶ್ನೆಯ (ಆ)ನ ಉತ್ತರದಲ್ಲಿ ಒದಗಿಸಲಾಗಿದೆ. |

**ಸಂಖ್ಯೆ: ಹೆಚ್‌ಡಿ 24 ಪಿಸಿಕ್ಯೂ 2026**

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು

Annexure-I

## Reported,Cases in INFORMATION TECHNOLOGY ACT

| SL NO | District/Units Name | 2021 | 2022 | 2023 | 2024 | 2025 | 2026(Feb-20th) |
|---|---|---|---|---|---|---|---|
| | | Reported | Reported | Reported | Reported | Reported | Reported |
| 1 | Bagalkot | 23 | 29 | 54 | 48 | 41 | 8 |
| 2 | Ballari | 60 | 47 | 78 | 119 | 93 | 19 |
| 3 | Belagavi City | 27 | 113 | 85 | 107 | 105 | 17 |
| 4 | Belagavi Dist | 32 | 40 | 93 | 72 | 85 | 23 |
| 5 | Bengaluru City | 6492 | 10052 | 17852 | 17909 | 10725 | 1378 |
| 6 | Bengaluru Dist | 95 | 251 | 702 | 720 | 390 | 37 |
| 7 | Bengaluru South | 84 | 247 | 151 | 212 | 229 | 38 |
| 8 | Bidar | 7 | 20 | 40 | 45 | 43 | 4 |
| 9 | Chamarajanagar | 14 | 26 | 43 | 32 | 35 | 1 |
| 10 | Chickballapura | 64 | 111 | 265 | 202 | 222 | 35 |
| 11 | Chikkamagaluru | 79 | 75 | 96 | 103 | 94 | 18 |
| 12 | Chitradurga | 27 | 57 | 64 | 81 | 71 | 16 |
| 13 | CID | 13 | 4 | 5 | 3 | 2 | 1 |
| 14 | Coastal Security | 0 | 0 | 0 | 0 | 0 | 0 |
| 15 | Dakshina Kannada | 64 | 32 | 57 | 115 | 138 | 20 |
| 16 | Davanagere | 79 | 103 | 109 | 144 | 116 | 11 |
| 17 | Dharwad | 16 | 38 | 48 | 68 | 51 | 10 |
| 18 | Gadag | 16 | 19 | 69 | 71 | 63 | 14 |
| 19 | Hassan | 49 | 49 | 118 | 141 | 96 | 15 |
| 20 | Haveri | 65 | 119 | 113 | 131 | 100 | 18 |
| 21 | Hubballi Dharwad City | 177 | 352 | 471 | 250 | 191 | 26 |
| 22 | ISD Bengaluru | 1 | 0 | 0 | 0 | 0 | 0 |
| 23 | K.G.F | 54 | 58 | 122 | 100 | 77 | 12 |
| 24 | Kalaburagi | 8 | 23 | 34 | 35 | 30 | 3 |
| 25 | Kalaburagi City | 22 | 21 | 43 | 44 | 56 | 10 |
| 26 | Karnataka Railways | 2 | 1 | 1 | 2 | 11 | 1 |
| 27 | Kodagu | 47 | 30 | 114 | 90 | 77 | 20 |
| 28 | Kolar | 37 | 56 | 69 | 65 | 78 | 9 |
| 29 | Koppal | 18 | 24 | 23 | 39 | 26 | 4 |
| 30 | Mandya | 33 | 62 | 52 | 78 | 82 | 11 |
| 31 | Mangaluru City | 112 | 85 | 264 | 149 | 148 | 13 |
| 32 | Mysuru City | 117 | 282 | 242 | 274 | 195 | 32 |
| 33 | Mysuru Dist | 52 | 66 | 46 | 59 | 70 | 12 |
| 34 | Raichur | 24 | 28 | 33 | 32 | 25 | 5 |
| 35 | Shivamogga | 104 | 47 | 68 | 139 | 159 | 32 |
| 36 | Tumakuru | 147 | 161 | 265 | 332 | 272 | 32 |
| 37 | Udupi | 49 | 56 | 135 | 222 | 199 | 27 |
| 38 | Uttara Kannada | 49 | 59 | 88 | 111 | 68 | 15 |
| 39 | Vijayanagara | 1 | 6 | 17 | 29 | 41 | 8 |
| 40 | Vijayapura | 27 | 62 | 106 | 86 | 371 | 49 |
| 41 | Yadgir | 9 | 9 | 20 | 24 | 24 | 3 |
| | **Grand Total** | **8396** | **12920** | **22255** | **22483** | **14899** | **2007** |

| S.L | Cyber Crime Head Name |
|---|---|
| 1 | CYBER CRIME-Information Technology Act 2000, 2009 |
| 2 | CYBER CRIME-OTP Frauds(KYC Update, Apk Link) |
| 3 | CYBER CRIME-ATM Fraud |
| 4 | CYBER CRIME-Credit Card Fraud |
| 5 | CYBER CRIME-Card Skimming |
| 6 | CYBER CRIME-Phishing (Taking Password & Information) |
| 7 | CYBER CRIME-SIM card Swapping / SIM Jacking/ SIM Cloning |
| 8 | CYBER CRIME-Matrimony Fraud |
| 9 | CYBER CRIME-Business Fraud |
| 10 | CYBER CRIME-Job Fraud |
| 11 | CYBER CRIME-OLX Fraud |
| 12 | CYBER CRIME-Investment Fraud ( Part Time Job, Task, Review) |
| 13 | CYBER CRIME-Investment Fraud( Trading & Share Trading) |
| 14 | CYBER CRIME-Remote Access Fraud( Any Desk/ Team Viewer) |
| 15 | CYBER CRIME-Data Theft |
| 16 | CYBER CRIME-Hacking of Accounts & IDs |
| 17 | CYBER CRIME-Ransomware Attack, Installing Spyware & Trojan, Using Other Malware & Viruses to infect digital serv |
| 18 | CYBER CRIME-Email Spoofing / Fraud |
| 19 | CYBER CRIME-Sextortion and Revenge Porn |
| 20 | CYBER CRIME-CSAM ( Child Pornography), Cyber Tip Line |
| 21 | CYBER CRIME-Deep Fake/ Deep Nudes |
| 22 | CYBER CRIME-Advertising Frauds |
| 23 | CYBER CRIME-Fake Customer Care |
| 24 | CYBER CRIME-Online Money Transfer |
| 25 | CYBER CRIME-AEPS ( Aadhaar) |
| 26 | CYBER CRIME-Loan App |
| 27 | CYBER CRIME-Gifts, iPhone & Lottery Fraud |
| 28 | CYBER CRIME-Social Media Cases ( Instagram/Facebook/Whatsapp/X /Telegram etc.) |
| 29 | CYBER CRIME-Crypto Currency, Bitcoin, etc. |
| 30 | CYBER CRIME-Fedex |
| 31 | CYBER CRIME-Others |
| 32 | CYBER CRIME-Digital Arrest |